**ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪ್ರಕರಣ**

**104(885); ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು)**

ಅ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪ್ರಕರಣ 143ರ ಪ್ರಕಾರ ನಿರ್ದಿಷ್ಟ ವಿಷಯದ ಬಗ್ಗೆ ಚರ್ಚಿಸಲು ಜಿಲ್ಲಾ ವ್ಯಾಪ್ತಿ ಹೊಂದಿರುವ ಅಧಿಕಾರಿಗಳನ್ನು ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಲು ತಾಲ್ಲೂಕು ಪಂಚಾಯತ್‌ಗೆ ಕಾಯ್ದೆಯನ್ವಯ ಅಧಿಕಾರ ಇದೆಯೇ (ವಿವರವಾದ ಮಾಹಿತಿ ನೀಡುವುದು)?

**ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)**

ಅ) ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳು ಹಾಜರಿರುವ ಬಗ್ಗೆ **ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 143** ಈ ಕೆಳಕಂಡಂತಿರುತ್ತದೆ.

**"ತಾಲ್ಲೂಕು ಪಂಚಾಯಿತಿಯು, ಸಭೆಗಳಲ್ಲಿ ಸರ್ಕಾರಿ ಅಧಿಕಾರಿಗಳ ಹಾಜರಾತಿಯನ್ನು ಅಗತ್ಯಪಡಿಸುವುದು–** ತಾಲ್ಲೂಕು ಪಂಚಾಯಿತಿಗೆ, ಒಂದು ಜಿಲ್ಲೆಯ ಮೇಲೆ ಅಥವಾ ಜಿಲ್ಲೆಗಿಂತ ಕಡಿಮೆ ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮತ್ತು ತಾಲ್ಲೂಕು ಪಂಚಾಯಿತಿಯ ಅಧೀನದಲ್ಲಿ ಕೆಲಸ ಮಾಡುತ್ತಿಲ್ಲದ ಯಾವನೇ ಅಧಿಕಾರಿಯ ಹಾಜರಾತಿಯು ತಾಲ್ಲೂಕು ಪಂಚಾಯಿತಿಯ ಸಭೆಯಲ್ಲಿ ಅಪೇಕ್ಷಣೀಯವೆಂದು ಕಂಡುಬಂದರೆ ಕಾರ್ಯನಿರ್ವಾಹಕ ಅಧಿಕಾರಿಯು ಉದ್ದೇಶಿತ ಸಭೆಗೆ ಮುಂಚೆ ಹದಿನೈದು ದಿವಸಗಳಿಗೆ ಕಡಿಮೆ ಇಲ್ಲದಂತೆ, ಅಂಥ ಅಧಿಕಾರಿಗೆ ಪತ್ರ ಬರೆದು, ಆ ಅಧಿಕಾರಿಯನ್ನು ಆ ಸಭೆಯಲ್ಲಿ ಹಾಜರಿರುವಂತೆ ಕೋರತಕ್ಕದ್ದು ಮತ್ತು ಆ ಅಧಿಕಾರಿಯು, ಅನಾರೋಗ್ಯ ಅಥವಾ ಇತರ ಯುಕ್ತ ಕಾರಣದಿಂದ ಆಗದಿದ್ದ ಹೊರತು, ಸಭೆಗೆ ಹಾಜರಾಗಬೇಕಾಗಿದೆ.

ಪರಂತು, ಅಧಿಕಾರಿಯು, ಅಂಥ ಪತ್ರವನ್ನು ಸ್ವೀಕರಿಸಿ ಮೇಲೆ ಹಿಂದೆ ಹೇಳಿದ ಯಾವುದೇ ಕಾರಣಕ್ಕಾಗಿ ತಾನೇ ಅಲ್ಲಿ ಖುದ್ದಾಗಿ ಹಾಜರಾಗಲು ಆಗದಿದ್ದರೆ ಆ ಸಭೆಯಲ್ಲಿ ಅವನನ್ನು ಪ್ರತಿನಿಧಿಸಲು ಅವನ ಪ್ರತಿನಿಧಿ ಅಥವಾ ಇತರ ಸಕ್ಷಮ ಅಧೀನ ಅಧಿಕಾರಿಗೆ ಸೂಚಿಸಬಹುದಾಗಿದೆ."

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 141ರಲ್ಲಿ ತಾಲ್ಲೂಕು ಪಂಚಾಯಿತಿ ಸಭೆಗಳ ಬಗ್ಗೆ ಸಂಪೂರ್ಣ ವಿವರಗಳಿರುತ್ತದೆ. ಆದಾಗ್ಯೂ, ಪ್ರಕರಣ 141(1) ರಲ್ಲಿ ತಿಳಿಸಿರುವಂತೆ ಸಭೆಗಳ ದಿನ, ವೇಳೆ, ನೋಟೀಸು, ವ್ಯವಸ್ಥಾಪನೆ ಮತ್ತು ಮುಂದೂಡಿಕೆಗಳಿಗೆ ಸಂಬಂಧಿಸಿದಂತೆ ಮತ್ತು ಸಾಮಾನ್ಯವಾಗಿ ಅದರಲ್ಲಿ ಕಾರ್ಯಕಲಾಪದ ನಿರ್ವಹಣೆಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಅಧಿನಿಯಮಕ್ಕೆ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮಗಳಿಗೆ ಅಸಂಗತವಾಗದಂತೆ ನಿಯಮಗಳನ್ನು ತಾಲ್ಲೂಕು ಪಂಚಾಯತಿಯು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 314 ರಂತೆ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಚಿಸಲು ಅವಕಾಶ ಕಲ್ಪಿಸಿರುತ್ತದೆ. ಅದರಂತೆ, ಕ್ರಮವಹಿಸಿ ತಾಲ್ಲೂಕು ಪಂಚಾಯತಿ ಸಭೆಗಳಲ್ಲಿ ಅಧಿಕಾರಿಗಳ ಹಾಜರಾತಿಯನ್ನು ಕಡ್ಡಾಯಗೊಳಿಸಲು ತಾಲ್ಲೂಕು ಪಂಚಾಯತಿಗಳು ವಿ–ನಿಯಮಗಳನ್ನು ರಚಿಸಿಕೊಳ್ಳಬಹುದಾಗಿರುತ್ತದೆ.

**ಶ್ರೀ ಗೋಪಾಲ ಪೂಜಾರಿ ಕೆ.:** ಉತ್ತರವನ್ನೊದಗಿಸಿದ್ದಾರೆ. ಆದರೆ, ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರಲ್ಲಿ, 143ರಲ್ಲಿ, ತಾಲ್ಲೂಕು ಪಂಚಾಯಿತಿಗೆ ಇರುವ ಅಧಿಕಾರದ ಬಗ್ಗೆ ಹೇಳಿದ್ದಾರೆ. ಆದೆ, ಜಿಲ್ಲಾಧಿಕಾರಿಗಳು, ಅದು ಮಾಡಲಿಕ್ಕೆ ಬರುವುದಿಲ್ಲ, ಆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೆ ವಿಶೇಷವಾದ ಜಿಲ್ಲಾಮಟ್ಟದ ಅಧಿಕಾರಿಗಳನ್ನು 15 ದಿವಸಗಳ ಮುಂಚಿತವಾಗಿ ನಿರ್ಣಯ ಮಾಡಿ, notice ಕೊಟ್ಟು, ಆ ಸಭೆಗೆ ಕರೆಯಬೇಕು ಎನ್ನುವ ಏನು ನಿಯಮ ಇದೆ, ಅದು ಇಲ್ಲ, ಆಗುವುದಿಲ್ಲ,

ಅದು ಉಸ್ತುವಾರಿ ಸಚಿವರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ಮಾತ್ರ ಎನ್ನುವಂಥ ಮಾತನ್ನು ಹೇಳಿದ್ದಾರೆ. ಇವತ್ತು ಅಲ್ಲಿ ಜನಪ್ರತಿನಿಧಿಗಳು ಪ್ರತಿಭಟನೆ ಮಾಡಿದ್ದಾರೆ. ಅಲ್ಲಿ ಚರ್ಚೆಯಾಗಿದೆ. ದೊಡ್ಡ ರೀತಿಯಲ್ಲಿ ಜನ ಪ್ರತಿನಿಧಿಗಳಿಗೆ ಅಲ್ಲಿ ನೋವಾಗಿದೆ. ಇದನ್ನು ಯಾವ ರೀತಿಯಲ್ಲಿ ಸರಿಪಡಿಸುತ್ತೀರಿ? ಜಿಲ್ಲಾಧಿಕಾರಿಗಳಿಗೆ ಯಾವ ರೀತಿ ಮಾಹಿತಿ ಕೊಡುತ್ತೀರಿ ಎನ್ನುವುದನ್ನು ಹೇಳಬೇಕಾಗುತ್ತದೆ.

**ಶ್ರೀ ಹೆಚ್.ಕೆ. ಪಾಟೀಲ್:** ಸನ್ಮಾನ್ಯ ಗೋಪಾಲ ಪೂಜಾರಿಯವರು ಕೇಳಿರತಕ್ಕಂಥ ಪ್ರಶ್ನೆ ಹಾಗೂ ಅವರು ವ್ಯಕ್ತ ಮಾಡಿರತಕ್ಕಂಥ ಭಾವನೆಯನ್ನು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ, ನಮ್ಮ ನಿಯಮಾವಳಿ ಪ್ರಕಾರ ಈಗಾಗಲೇ ತಮಗೂ ಗೊತ್ತಿದ್ದ ಹಾಗೆ, ಒಬ್ಬ ಅಧಿಕಾರಿ ಹಾಜರಾಗದೇ ಹೋದರೆ ಅದೇ grade ನ ಅಧಿಕಾರಿಯನ್ನು, ತತ್ಸಮಾನವಾಗಿರತಕ್ಕಂಥ ಅಧಿಕಾರಿಯನ್ನು ಸಭೆಗೆ ಕಳುಹಿಸಿಕೊಡಬಹುದು ಅಥವಾ ಅವನ ಪ್ರತಿನಿಧಿಯನ್ನು ಕಳುಹಿಸುವುದಕ್ಕೆ ಅವಕಾಶವಿದೆ. ಆದರೆ, ಯಾರಾದರೂ ಅಧಿಕಾರಿ ನಿಮ್ಮ ಗಮನಕ್ಕೆ ಬಂದು ಅವರು ಉದ್ದೇಶಪೂರ್ವಕವಾಗಿ ತಪ್ಪಿಸುತ್ತಾರೆಂದು ನಿಮಗೆ ಅನಿಸಿತ್ತು ಎಂದರೆ ಅದರ ಬಗ್ಗೆ ತಾವು ಮಾಹಿತಿ ಕೊಡಿ. ಅವರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಗೋಪಾಲ ಪೂಜಾರಿ ಕೆ.:** ಸ್ವತ: ಜಿಲ್ಲಾಧಿಕಾರಿಗಳು ಉಸ್ತುವಾರಿ ಸಚಿವರ ಎದುರುಗಡೆ ಕಾನೂನಿನಲ್ಲಿ ಕಳುಹಿಸಲಿಕ್ಕೆ ಅವಕಾಶವಿಲ್ಲ ಎಂದು ಅಲ್ಲಿ ಹೇಳಿದಾಗ ಈ ನಿಯಮವನ್ನು ಉಲ್ಲಂಘನೆ ಮಾಡಿದಂತಾಗುತ್ತದೆ. ತಮ್ಮ ನಿಯಮ 143 ಏನು ಹೇಳುತ್ತಿದೆ ಎಂದರೆ, 15 ದಿನಗಳ ಮುಂಚೆ ತಾಲ್ಲೂಕು ಪಂಚಾಯಿತಿಯಲ್ಲಿ ನಿರ್ಣಯ ಮಾಡಿ ಆ ಅಧಿಕಾರಿಗಳಿಗೆ notice ಮಾಡಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಆ ಸಭೆಗೆ ಕರೆಸಲಿಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಆದರೆ, ಆ ಅವಕಾಶವನ್ನು ಜಿಲ್ಲಾಧಿಕಾರಿಗೆ ಮನದಟ್ಟು ಮಾಡಿದರೂ ಸಹ ಜಿಲ್ಲಾಧಿಕಾರಿಯವರು, ಕರೆಸಲಿಕ್ಕೆ ಅವಕಾಶವಿಲ್ಲ ಎಂದು ನೇರವಾಗಿ ಹೇಳಿದಾಗ ಇದು ತಾಲ್ಲೂಕು ಪಂಚಾಯಿತಿಯ ಅಧಿಕಾರವನ್ನು ಚ್ಯುತಿ ಮಾಡಿದಂತಾಗುತ್ತದೆ. ಇದಕ್ಕೆ ತಮ್ಮ ಅಭಿಪ್ರಾಯವೇನೆಂದು ಹೇಳಬೇಕಾಗುತ್ತದೆ.

**ಶ್ರೀ ಹೆಚ್.ಕೆ. ಪಾಟೀಲ್:** ಅವರು ಹೇಳುವುದು, ಕಾನೂನು ಪ್ರಕಾರ ಅವರನ್ನು ಕರೆಸುವುದಕ್ಕೆ ಅಧಿಕಾರ ಇದೆ. ಅವರು ಬರಬೇಕಾದುದು ಅವರ ಕರ್ತವ್ಯ. ಯಾವುದಾದರೂ ಕಾರಣಗಳಿಂದಾಗಿ genuine reasons ನಿಂದ ಅವರು ಬರದೇ ಅವರ ಸಮಾನವಾಗಿರತಕ್ಕಂಥ ಅಧಿಕಾರಿಯನ್ನು ಅಥವಾ ಅವರ ಪ್ರತಿನಿಧಿಯನ್ನು ಕಳುಹಿಸುವುದಾದರೆ ಅದಕ್ಕೂ ಅವಕಾಶವಿದೆ. ಒಂದು ವೇಳೆ ದುರುದ್ದೇಶದಿಂದ ಅವರು ಹಾಜರಾಗುವುದನ್ನು ತಪ್ಪಿಸುತ್ತಿದ್ದರೆ ಅಂಥ ಮಾಹಿತಿಯನ್ನು ಕೊಡಿ.

**ಶ್ರೀ ಗೋಪಾಲ ಪೂಜಾರಿ ಕೆ.:** ಜಿಲ್ಲಾಧಿಕಾರಿಗಳು, ಕಾನೂನಿನಲ್ಲಿ ಅವಕಾಶವಿಲ್ಲವೆಂದು ಹೇಳಿದ್ದಾರೆ.

**ಉಪಾಧ್ಯಕ್ಷರು:** ಹೇಳಿದ್ದೀರಲ್ಲ.

**ಶ್ರೀ ಗೋಪಾಲ ಪೂಜಾರಿ ಕೆ.:** ನಾವು ಜನಪ್ರತಿನಿಧಿಗಳು ವಾದ ಮಾಡುತ್ತೇವೆ. ನಿಯಮ 143ರಲ್ಲಿ, ಕಾನೂನಿನಲ್ಲಿ ಅವಕಾಶವಿದೆ. ಅವರು ಹೇಳುತ್ತಿರತಕ್ಕಂಥದ್ದು, ಕಾನೂನಿನಲ್ಲಿ ಅವಕಾಶ ಇಲ್ಲ. ಉಸ್ತುವಾರಿ ಸಚಿವರಿಗೆ, ಮಾನ್ಯ ಮುಖ್ಯಮಂತ್ರಿಯವರಿಗೆ ಮಾತ್ರ ಕರೆಸಲಿಕ್ಕೆ ಕಾನೂನಿನಲ್ಲಿ ಅವಕಾಶ ಇದೆ ಎನ್ನುವ ಮಾತನ್ನು ಹೇಳಿದ್ದಾರೆ.

**ಉಪಾಧ್ಯಕ್ಷರು:** ಆಯಿತು, ವರದಿ ತರಿಸಿಕೊಳ್ಳಿ.

**ಶ್ರೀ ಹೆಚ್.ಕೆ. ಪಾಟೀಲ್:** ಜಿಲ್ಲಾಧಿಕಾರಿಗಳು ಆ ರೀತಿ ಹೇಳಿದ್ದರೆ, ಜಿಲ್ಲಾಧಿಕಾರಿಗಳಿಗೆ ಸರಿಯಾಗಿ ಸಮಾಜಾಯಿಷಿ ಕೊಡುವಂತೆ ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ನಾನು ಸೂಚನೆ ಕೊಡುತ್ತೇನೆ.